**ಓ.ಎಸ್. ನಂ. 81/2021** **ಪಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 2.12.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಂ.ಕೆ ವಕೀಲರಿಂದಃ</u>

ನಾನು ದ್ವಿತೀಯ ಪಿಯುಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಈ ದಾವೆಯನ್ನು ನಾನು ಯಾವ ಕಾರಣಕ್ಕೆ ಸಲ್ಲಿಸಿರುತ್ತೇನೆ ಎಂದು ಗೊತ್ತಿರುತ್ತದೆ. ದಾವಆಸ್ತಿಗೆ ಮಾಲೀಕರೆಂದು ಘೋಷಣೆ ಮಾಡಬೇಕೆಂದು ಈ ದಾವೆಯನ್ನು ಸಲ್ಲಿಸಿರುತ್ತೇನೆ. ಈ ದಾವೆ ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ತಂದೆ 1 ನೇ ವಾದಿ ಈಗಲೂ ಆರೋಗ್ಯವಾಗಿರುತ್ತಾರೆ ಎಂದರೆ ಸರಿ. ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಯಾವುದೇ ತೊಂದರೆ ಇರುವುದಿಲ್ಲ. ನನ್ನ ತಾಯಿ ದಿನಾಂಕ 11.5.2017 ರಲ್ಲಿ ತೀರಿಕೊಂಡಿರುತ್ತಾರೆ. ದಾವಆಸ್ತಿಯು ನನ್ನ ತಾಯಿಗೆ ಬಂದಿರುತ್ತದೆ ಎಂದರೆ ಸರಿ. ಅವರಿಗೆ ಸರ್ಕಾರದಿಂದ ಸದರಿ ಆಸ್ತಿಯು 1977 ರಲ್ಲಿ ಮಂಜೂರಾಗಿರುತ್ತದೆ. ಅದರ ವಿಸ್ತೀರ್ಣ 3 ಎಕರೆ ಆಗಿರುತ್ತದೆ. ಮಂಜೂರಾದ ನಂತರ ನಿಷೇದದ ಅವಧಿ ಮುಗಿದ ನಂತರ ಸದರಿ ಆಸ್ತಿಯನ್ನು ಅವರು ಬೋಗ್ಯ, ಪರಭಾರೆ, ಆಧಾರ ಮಾಡಲು ಸಂಪೂರ್ಣ ಹಕ್ಕು ಹೊಂದಿದ್ದರು ಎಂದರೆ ಸರಿ. ಈ ದಾವೆಯಲ್ಲಿ ನಾವು ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ಗೊತ್ತಿರುತ್ತದೆ. ಸದರಿ ದಾಖಲಾತಿಗಳನ್ನು ನಾನೇ ಪಡೆದುಕೊಂಡಿರುತ್ತೇನೆ. ನಿಪಿ2 ನ್ನು ನಾನು ದಿನಾಂಕ 12.1.2009 ರಂದು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಿಪಿ3 ನ್ನು ನಾನು ದಿನಾಂಕ 27.7.2002 ರಂದು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಿಪಿ4 ನ್ನು ದಿನಾಂಕ 11.12.2017 ರಂದು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಿಪಿ2 ರಿಂದ 4 ಪಹಣಿಗಳ 9 ನೇ ಕಲಂನಲ್ಲಿ ಜಿ.ನಾರಾಯಣ್ ರವರ ಪರವಾಗಿ ಜಿಪಿಎ ಹೋಲ್ಡರ್ ಕೆ.ರವಿಬಾಬು ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ8 ರಲ್ಲಿ ಬೆರೆಸಿಕೊಂಡವರ ವಿವರದಲ್ಲಿ ಜಿ.ನಾರಾಯಣ್ ರವರ ಪರವಾಗಿ ಜಿಪಿಎ ಹೋಲ್ಡರ್ ಕೆ.ರವಿಬಾಬು ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ7 ರಲ್ಲಿ ಸರ್ವೆ ನಂ.59/ಬಿ-ಪಿ1 ರಲ್ಲಿ ಸಣ್ಣನಿಂಗಮ್ಮ, 1 ಎಕರೆ ಎಂದು ಮಾತ್ರ ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಅದು ಸುಳ್ಳಾಗಿರುತ್ತದೆ ಎನ್ನುವರು. ನಿಪಿ7 ರಲ್ಲಿರುವ ವಿವರಗಳು ಸರಿಯಿರುವುದಿಲ್ಲ ಎಂದು ನಾನು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ದಾವಆಸ್ತಿಯಲ್ಲಿರುವ ಸುಣ್ಣದ ಕಲ್ಲನ್ನು ಮಾತ್ರ ಕಿತ್ತುಕೊಳ್ಳುತ್ತೇನೆ ಎಂದು ಯಾವಾಗ ಹೇಳಿರುತ್ತಾರೆ ಎಂದು ನನಗೆ ಸ್ವತಃ ಮಾಹಿತಿ ಇರುವುದಿಲ್ಲ, ನನ್ನ ತಾಯಿ ನನಗೆ ಹೇಳಿರುತ್ತಾರೆ. ಸದರಿ ಸಮಯದಲ್ಲಿ ನನ್ನ ತಾಯಿ 1 ನೇ ಪ್ರತಿವಾದಿ ಜೊತೆ ಕರಾರು ಮಾಡಿಕೊಂಡಿರುತ್ತೇನೆ ಎಂದು ಹೇಳಿರುವುದಿಲ್ಲ. ದಾವಆಸ್ತಿಯಲ್ಲಿ ಸುಣ್ಣದಕಲ್ಲು ಇರುವ ಬಗ್ಗೆ ಪಹಣಿಯಲ್ಲಿ ನಮೂದಾಗಿರುತ್ತದೆ. ಪಹಣಿಯಲ್ಲಿ ಮಣ್ಣಿನ ನಮೂನೆ ಸುಣ್ಣಕಲ್ಲು

ಎಂದು ನಮೂದಾಗಿದ್ದು, ದಾವಆಸ್ತಿಯಲ್ಲಿ ಸುಣ್ಣದಕಲ್ಲು ಸಿಗುತ್ತದೆ ಎಂದು ನಮೂದಾಗಿರುವುದಿಲ್ಲ ಎಂದರೆ ಸರಿ.

1 ನೇ ವಾದಿ ಮತ್ತು ನನ್ನ ತಾಯಿ ಸೇರಿ ದಿನಾಂಕ 31.7.1995 ರಂದು ದಾವಆಸ್ತಿಯನ್ನು ಜಿ.ನಾರಾಯಣ್ ರವರ ಪರವಾಗಿ ಜಿಪಿಎ ಹೋಲ್ಡರ್ ಕೆ.ರವಿಬಾಬು ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಿನ ಸದರಿ ಕ್ರಯಪತ್ರವು ಹೆಚ್.ಡಿ.ಕೋಟೆಯ ಉಪನೋಂದಣಾಧಿಕಾರಿ ಕಛೇರಿಯಲ್ಲಿ ನೋಂದಣಿಯಾಗಿರುತ್ತದೆ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ಕ್ರಯಪತ್ರವು ಸದರಿ ಕ್ರಯಪತ್ರವಾಗಿದ್ದು, ಅದಕ್ಕೆ ನನ್ನ ತಂದೆ ತಾಯಿ ಹೆಬ್ಬೆಟ್ಟು ಗುರುತು ಹಾಕಿರುತ್ತಾರೆ ಎಂದರೆ ಸಾಕ್ಷಿದಾರರು ದಾವಆಸ್ತಿಯಲ್ಲಿ ಸುಣ್ಣದ ಕಲ್ಲನ್ನು ಕಿತ್ತುಕೊಳ್ಳುತ್ತೇನೆ ಎಂದು ಹೇಳಿ ಸುಳ್ಳು ದಾಖಲಾತಿಯನ್ನು ಮಾಡಿಕೊಂಡಿರುತ್ತಾರೆ ಎನ್ನುವರು. ಸದರಿ ಕ್ರಯಪತ್ರದಲ್ಲಿ ನನ್ನ ತಂದೆ ತಾಯಿ ಅವರಿಗೆ ಇದ್ದ ಕೈಸಾಲ ಮತ್ತು ಕುಟುಂಬದ ಅವಶ್ಯಕತೆಗೆ ಆಸ್ತಿಯನ್ನು ಮಾರಾಟ ಮಾಡುತ್ತಿರುವುದಾಗಿ ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ. 1995 ರಿಂದ ಸದರಿ ಕ್ರಯಪತ್ರವನ್ನು ಈವರೆವಿಗೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ, ಸಾಕ್ಷಿದಾರರು ಮುಂದುವರಿದು ಪ್ರತಿವಾದಿಯರು 2021 ರಲ್ಲಿ ಗಲಾಟೆ ಮಾಡಿದಾಗ ಈ ದಾವೆಯನ್ನು ಹೂಡಿರುತ್ತೇನೆ ಎನ್ನುವರು. 1995 ರಿಂದಲೂ ದಾವಆಸ್ತಿಯು ಪಹಣಿಯು ಜಿ.ನಾರಾಯಣ್ ರವರ ಪರವಾಗಿ ಜಿಪಿಎ ಹೋಲ್ಡರ್ ಕೆ.ರವಿಬಾಬು ಎಂದು ನಮೂದಾಗಿದ್ದು ಸದರಿ ವಿಚಾರ ನಮಗೆ ಗೊತ್ತಿತ್ತು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.